Reg. No. D. 221

भारत का राजपत्र

# The Gazette of India

ಭಾರತ ರಾಜ ಪತ್ರ

(EXTRAORDINARY)

ವಿಶೇಷ ಸಂಚಿಕೆ

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, डिसेम्बर 22, 1986 | पुष्य 1, 1908 (शक) | खण्ड–6 |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |


## MINISTRY OF LAW AND JUSTICE

(Legislative Department)

New Delhi, October 30, 1986

The translations in Kannada of the following namely—(1) The All India Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಜನಗಣತಿ ಅಧಿನಿಯಮ, 1948

(1948ರ 37) [3ನೇ ಸೆಪ್ಟೆಂಬರ್ 1948]

ಜನಗಣತಿಯನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಕೆಲವು ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಆವಶ್ಯವಿದ್ದಾಗಲೆಲ್ಲಾ ಅಥವಾ ಅಪೇಕ್ಷಣೀಯವಾದಾಗಲೆಲ್ಲಾ ಭಾರತದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಜನಗಣತಿಯನ್ನು ತೆಗೆದುಕೊಳ್ಳುವುದಕ್ಕಾಗಿ ಉಪಬಂಧಿಸುವುದು ಮತ್ತು ಅಂಥ ಜನಗಣತಿಯನ್ನು ತೆಗೆದುಕೊಳ್ಳುವ ಸಂಬಂಧದಲ್ಲಿ ಕೆಲವು ವಿಷಯಗಳಿಗೆ ಉಪಬಂಧಿಸುವುದು ವಿಹಿತವಾಗಿರುವುದರಿಂದ:

ಅದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ :

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.—(1) ಈ ಅಧಿನಿಯಮವನ್ನು ಜನಗಣತಿ ಅಧಿನಿಯಮ, 1948 ಎಂದು ಕರೆಯತಕ್ಕದ್ದು,

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. ಜಮ್ಮು ಮತ್ತು ಕಾಶ್ಮೀರಕ್ಕೆ ವ್ಯಾಪ್ತವಾಗದ ಅಧಿನಿಯಮಿತಿಗಳ ಸಂಬಂಧದಲ್ಲಿ ಅರ್ಥಾನ್ವಯ ನಿಯಮ.—ಈ ಅಧಿನಿಯಮದಲ್ಲಿ ಭಾರತ ದಂಡ ಸಂಹಿತೆ (1860ರ 45) ಹಾಗೂ ಭಾರತ ಸಾಕ್ಷ್ಯ ಅಧಿನಿಯಮ, 1872ರ ಯಾವುದೇ ಉಲ್ಲೇಖವನ್ನು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಅಧಿನಿಯಮಿತಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು,

3. ಕೇಂದ್ರ ಸರ್ಕಾರವು ಜನಗಣತಿಯನ್ನು ತೆಗೆದುಕೊಳ್ಳತಕ್ಕದ್ದು.—ಕೇಂದ್ರ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮವು ವ್ಯಾಪ್ತವಾಗುವ ಇಡೀ ರಾಜ್ಯಕ್ಷೇತ್ರಗಳಲ್ಲಿ ಅಥವಾ ಅವುಗಳ ಯಾವುದೇ ಭಾಗದಲ್ಲಿ ಹಾಗೆ ಮಾಡುವುದು ಆವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಅದು ಪರ್ಯಾಲೋಚಿಸಬಹುದಾಗಲೆಲ್ಲ ಜನಗಣತಿ ತೆಗೆದುಕೊಳ್ಳುವ ತನ್ನ ಉದ್ದೇಶವನ್ನು ಘೋಷಿಸಬಹುದು, ಮತ್ತು ಆಮೇಲೆ ಜನಗಣತಿಯನ್ನು ತೆಗೆದುಕೊಳ್ಳತಕ್ಕದ್ದು.

4. ಜನಗಣತಿಯ ಸಿಬ್ಬಂದಿಯ ನೇಮಕಾತಿ.—(1) ಕೇಂದ್ರ ಸರ್ಕಾರವು ಜನಗಣತಿಯನ್ನು ತೆಗೆದುಕೊಳ್ಳಲು ಉದ್ದೇಶಿಸಿರುವ ಇಡೀ ಪ್ರದೇಶದಲ್ಲಿ ಜನಗಣತಿ ತೆಗೆದುಕೊಳ್ಳುವುದರ ಬಗ್ಗೆ ಮೇಲ್ವಿಚಾರಣೆ ನಡೆಸಲು ಜನಗಣತಿ ಕಮಿಷನರ್‌ನನ್ನು ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಜನಗಣತಿ ತೆಗೆದುಕೊಳ್ಳುವ ಬಗ್ಗೆ ಮೇಲ್ವಿಚಾರಣೆ ನಡೆಸಲು ಜನಗಣತಿ ಕಾರ್ಯಾಚರಣೆಯ ನಿರ್ದೇಶಕರನ್ನು ನೇಮಿಸಬಹುದು,

(2) ರಾಜ್ಯ ಸರ್ಕಾರ ಯಾವುದೇ ನಿರ್ದಿಷ್ಟ ಸ್ಥಳೀಯ ಪ್ರದೇಶದೊಳಗೆ ಜನಗಣತಿಯನ್ನು ತೆಗೆದುಕೊಳ್ಳಲು ಅಥವಾ ಅದಕ್ಕೆ ಸಹಾಯ ನೀಡಲು ಅಥವಾ ಅವರ ಮೇಲ್ವಿಚಾರಣೆ ನಡೆಸಲು ವ್ಯಕ್ತಿಗಳನ್ನು ಜನಗಣತಿ ಅಧಿಕಾರಿಗಳನ್ನಾಗಿ ನೇಮಿಸಬಹುದು, ಮತ್ತು ಅಂಥ ವ್ಯಕ್ತಿಗಳು ನೇಮಿಸಿದಾಗ ತದನುಸಾರವಾಗಿ ಸೇವೆ ಸಲ್ಲಿಸಲು ಬದ್ಧರಾಗಿರತಕ್ಕದ್ದು.

(3) ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಪ್ರಾಧಿಕಾರಿಯು ಸಹಿ ಹಾಕಿದ, ಯಾವನೇ ವ್ಯಕ್ತಿಯನ್ನು ಯಾವುದೇ ಸ್ಥಳೀಯ ಪ್ರದೇಶಕ್ಕೆ ಜನಗಣತಿಯ ಅಧಿಕಾರಿಯನ್ನಾಗಿ ಕ್ರಮಬದ್ಧವಾಗಿ ನೇಮಿಸಲಾಗಿದೆ ಎಂಬ ಬರಹದಲ್ಲಿನ ಘೋಷಣೆಯು ಅಂಥ ನೇಮಕಾತಿಯ ನಿರ್ಣಯಕ ರುಜುವಾತಾಗಿರತಕ್ಕದ್ದು,

5. ಲೋಕ ನೌಕರರಾಗಿ ಜನಗಣತಿ ಅಧಿಕಾರಿಗಳ ಸ್ಥಾನಮಾನ.—ಜನಗಣತಿ ಕಮಿಷನರ್, ಜನಗಣತಿಯ ಕಾರ್ಯಾಚರಣೆಯ ನಿರ್ದೇಶಕರು ಮತ್ತು ಎಲ್ಲ ಜನಗಣತಿ ಅಧಿಕಾರಿಗಳು ಭಾರತ ದಂಡ ಸಂಹಿತೆಯ (1960ರ 45) ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

6. ಕೆಲವು ಸಂದರ್ಭಗಳಲ್ಲಿ ಜನಗಣತಿ ಅಧಿಕಾರಿಗಳ ಕರ್ತವ್ಯ ನಿರ್ವಹಣೆ.—ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ನೇಮಿಸಬಹುದಾದಂಥ ಪ್ರಾಧಿಕಾರಿಯು ಬರಹದ ಆದೇಶದ ಮೂಲಕ ಹಾಗೆ ನಿರ್ದೇಶಿಸಿದಲ್ಲಿ.—

(ಕ) ಭಾರತದ ನೌಕಾದಳ, ಸೇನೆ ಅಥವಾ ವಾಯು ಸೇನೆ ಅಥವಾ ಯಾವುದೇ ಯುದ್ಧ ನೌಕೆಗೆ ಸೇರಿದ ಜನನಿಕಾಯದ ಅಧಿಪತ್ಯ ಹೊಂದಿರುವ ಪ್ರತಿಯೊಬ್ಬ ಅಧಿಕಾರಿ;

(ಖ) ನೌಕೆಯ ಪ್ರಭಾರ ಅಥವಾ ನಿಯಂತ್ರಣವನ್ನು ಹೊಂದಿರುವ (ಚಾಲಕ ಅಥವಾ ಬಂದರು ಅಧಿಕಾರಿಯನ್ನು ಹೊರತುಪಡಿಸಿ) ಪ್ರತಿಯೊಬ್ಬ ವ್ಯಕ್ತಿ,

(ಗ) ಮನೋವಿಕಲರ ರಕ್ಷಣಾಗೃಹ, ಆಸ್ಪತ್ರೆ. ಅನಾಥಾಲಯ, ಕಾರಾಗೃಹ ಸುಧಾರಣಾಲಯ ಅಥವಾ ಲಾಕ್ ಅಪ್ ಅಥವಾ ಯಾವುದೇ ಸಾರ್ವಜನಿಕ, ಧರ್ಮಾರ್ಥ, ಧಾರ್ಮಿಕ ಸಹ ಶೈಕ್ಷಣಿಕ ಸಂಸ್ಥೆಗಳ ಪ್ರಭಾರ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿ;

(ಘ) ಯಾವುದೇ ಸರಾಯಿ, ಹೊಟೆಲ್, ಭೋಜನಗೃಹ. ವಸತಿ ಗೃಹ, ವಲಸೆ ಡಿಪೋ ಅಥವಾ ಕ್ಲಬ್‌ನ್ನು ನಡೆಸುವ ಪ್ರತಿಯೊಬ್ಬ ಕಾರ್ಯದರ್ಶಿ ಅಥವಾ ವ್ಯವಸ್ಥಾಪಕ;

(ಙ) ರೈಲ್ವೆ ಅಥವಾ ಯಾವುದೇ ವಾಣಿಜ್ಯ ಅಥವಾ ಔದ್ಯಮಿಕ ಸಂಸ್ಥೆಯ ಪ್ರತಿಯೊಬ್ಬ ವ್ಯವಸ್ಥಾಪಕ ಅಥವಾ ಅಧಿಕಾರಿ, ಮತ್ತು;

(ಚ) ಜನಗಣತಿ ತೆಗೆದುಕೊಳ್ಳುವ ಕಾಲದಲ್ಲಿ ಯಾವ ಸ್ಥಿರಸ್ವತ್ತಿನಲ್ಲಿ ವ್ಯಕ್ತಿಗಳು ವಾಸಿಸುತ್ತಿರುವರೋ ಆ ಸ್ಥಿರ ಸ್ವತ್ತಿನ ಪ್ರತಿಯೊಬ್ಬ ಅಧಿಭೋಗದಾರ;

ಇವರುಗಳು ಜನಗಣತಿ ತೆಗೆದುಕೊಳ್ಳುವ ಕಾಲದಲ್ಲಿ ತಮ್ಮ ಆಧಿಪತ್ಯ ಅಥವಾ ಪ್ರಭಾರದಲ್ಲಿರುವ ಅಥವಾ ತಮ್ಮ ಮನೆಯಲ್ಲಿ ವಾಸಿಸುತ್ತಿರುವ ಅಥವಾ ಅಂಥ ಸ್ಥಿರ ಸ್ವತ್ತಿನ ಮೇಲೆ ಅಥವಾ ಒಳಗೆ ಇರುವ ಅಥವಾ ತಮ್ಮ ಕೈಕೆಳಗೆ ನಿಯೋಜಿತರಾಗಿರುವ ವ್ಯಕ್ತಿಗಳ ಸಂಬಂಧದಲ್ಲಿ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಜನಗಣತಿ ಅಧಿಕಾರಿಯ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು,

(2) ಜನಗಣತಿ ಅಧಿಕಾರಿಗಳಿಗೆ ಸಂಬಂಧಿಸಿದ ಈ ಅಧಿನಿಯಮದ ಎಲ್ಲಾ ಉಪಬಂಧಗಳು ಈ ಪ್ರಕರಣದ ಮೇರೆಗೆ ಅಂಥ ಕರ್ತವ್ಯಗಳನ್ನು ನೆರವೇರಿಸುತ್ತಿರುವಲ್ಲಿ ಎಲ್ಲಾ ವ್ಯಕ್ತಿಗಳಿಗೂ ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು, ಮತ್ತು ಈ ಪ್ರಕರಣದ ಮೇರೆಗೆ ಅವನು ನೆರವೇರಿಸಬೇಕೆಂದು ನಿರ್ದೇಶಿಸಿರುವ ಯಾವುದೇ ಕರ್ತವ್ಯವನ್ನು ನೆರವೇರಿಸಲು ನಿರಾಕರಿಸುವ ಅಥವಾ ನಿರ್ಲಕ್ಷಿಸುವ ಯಾವನೇ ವ್ಯಕ್ತಿಯು ಭಾರತ ದಂಡ ಸಂಹಿತೆಯ 1860(1860ರ 45)ನೇ ಪ್ರಕರಣದ ಮೇರೆಗೆ, ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು.

7. ನೆರವು ನೀಡಬೇಕೆಂದು ಕೆಲವು ವ್ಯಕ್ತಿಗಳನ್ನು ಕೋರುವ ಅಧಿಕಾರ.—ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಯಾವುದೇ ಸ್ಥಳೀಯ ಪ್ರದೇಶಕ್ಕಾಗಿ ಈ ಬಗ್ಗೆ ರಾಜ್ಯ ಸರ್ಕಾರವು ನೇಮಿಸಬಹುದಾದಂತಹ ಪ್ರಾಧಿಕಾರಿಯು ಸಂದರ್ಭಾನುಸಾರ ತನ್ನ ಜಿಲ್ಲಾದ್ಯಂತ ಅಥವಾ ಅಂಥ ಸ್ಥಳೀಯ ಪ್ರದೇಶದಾದ್ಯಂತ ಪರಿಣಾಮಕಾರಿಯಾಗತಕ್ಕ ಲಿಖಿತ ಆದೇಶದ ಮೂಲಕ

(ಕ) ಎಲ್ಲ ಭೂ ಒಡೆಯರು ಮತ್ತು ಅಧಿಭೋಗದಾರರು ಹಿಡುವಳಿದಾರರು ಮತ್ತು ರೈತರು, ಭೂ ಕಂದಾಯದ ಹಸ್ತಾಂತರಗ್ರಾಹಿಗಳು ಅಥವಾ ಅವರ ಏಜಂಟರುಗಳನ್ನು;

(ಖ) ಜಿಲ್ಲೆ, ಪುರಸಭೆ, ಪಂಚಾಯತಿ ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳ ಎಲ್ಲಾ ಸದಸ್ಯರು ಹಾಗೂ ಅಂಥ ಪ್ರಾಧಿಕಾರಗಳ ಅಧಿಕಾರಿಗಳು ಮತ್ತು ನೌಕರರುಗಳನ್ನು; ಹಾಗೂ

(ಗ) ಯಾವುದೇ ಕಾರ್ಖಾನೆ, ಫರ್ಮು ಅಥವಾ ಕಾರ್ಯ ಸಂಸ್ಥೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸದಸ್ಯರುಗಳನ್ನು.—

ಜನಗಣತಿಯನ್ನು ತೆಗೆದುಕೊಳ್ಳುವ ಕಾಲದಲ್ಲಿ ಸಂದರ್ಭಾನುಸಾರ ಅಂಥ ಭೂ ಒಡೆಯರ ಅಧಿಭೋಗದಾರರ, ಹಿಡುವಳಿದಾರರ ರೈತರ ಮತ್ತು ಗ್ರಾಹಿಗಳ ಭೂಮಿಯ ಮೇಲೆ ಅಥವಾ ಕಾರ್ಖಾನೆಗಳು, ಫರ್ಮುಗಳು ಮತ್ತು ಇತರ ಕಾರ್ಯ ಸಂಸ್ಥೆಗಳ ಆವರಣಗಳಲ್ಲಿ. ಅಥವಾ ಯಾವ ಪ್ರದೇಶಗಳಿಗೆ ಅಂಥ ಸ್ಥಳೀಯ ಪ್ರಾಧಿಕಾರಗಳನ್ನು ಸ್ಥಾಪಿಸಲಾಗಿದೆಯೋ ಆ ಪ್ರದೇಶಗಳಲ್ಲಿ ಇರುವ ವ್ಯಕ್ತಿಗಳ ಜನಗಣತಿಯನ್ನು ತೆಗೆದುಕೊಳ್ಳುವ ಬಗ್ಗೆ ಆದೇಶದಲ್ಲಿ ನಿರ್ದಿಷ್ಟಪಡಿಸಿರತಕ್ಕಂಥ ನೆರವನ್ನು ನೀಡಲು ಕೋರಬಹುದು ಮತ್ತು ಯಾರಿಗೆ ಈ ಪ್ರಕರಣದ ಮೇರೆಗಿನ ಒಂದು ಆದೇಶವನ್ನು ನಿರ್ದೇಶಿಸಲಾಗಿದೆಯೋ ಆ ವ್ಯಕ್ತಿಗಳು ಅದನ್ನು ಪಾಲಿಸಲು ಬದ್ಧರಾಗಿರತಕ್ಕದ್ದು ಹಾಗೂ ಅಂಥ ಆದೇಶವನ್ನು ಅನುಸರಿಸಿ ಕಾರ್ಯ ನಿರ್ವಹಿಸುತ್ತಿರುವಾಗ ಭಾರತ ದಂಡ ಸಂಹಿತೆಯ (1860ರ 45) ಅರ್ಥ ವ್ಯಾಪ್ತಿಯಲ್ಲಿ ಅವರನ್ನು ಲೋಕ ನೌಕರರು ಎಂದು ಭಾವಿಸತಕ್ಕದ್ದು.

8. ಪ್ರಶ್ನೆಗಳನ್ನು ಕೇಳುವುದು ಮತ್ತು ಉತ್ತರಿಸುವ ಹೊಣೆ.—ಜನಗಣತಿ ಅಧಿಕಾರಿಯು ತನ್ನನ್ನು ಯಾವ ಸ್ಥಳೀಯ ಪ್ರದೇಶಕ್ಕಾಗಿ ನೇಮಿಸಲಾಗಿದೆಯೋ ಆ ಸ್ಥಳೀಯ ಪ್ರದೇಶದ ಮಿತಿಗಳೊಳಗೆ ಇರುವ ಎಲ್ಲಾ ವ್ಯಕ್ತಿಗಳಿಗೆ ರಾಜ್ಯ ಸರ್ಕಾರವು ಈ ಬಗ್ಗೆ ಹೊರಡಿಸಿದ ಮತ್ತು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅನುದೇಶಗಳ ಮೂಲಕ ತಾನು ಕೇಳಲು ನಿರ್ದೇಶಿಸಲ್ಪಡಬಹುದಾದಂತಹ ಎಲ್ಲಾ ಪ್ರಶ್ನೆಗಳನ್ನು ಕೇಳಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಯಾರಿಗೆ ಯಾವುದೇ ಪ್ರಶ್ನೆಯನ್ನು ಕೇಳಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು ಅಂಥ ಪ್ರಶ್ನೆಗೆ ತನಗೆ ತಿಳಿದಿರುವ ಅಥವಾ ನಂಬಿರುವ ಮಟ್ಟಿಗೆ ಉತ್ತರ ನೀಡಲು ಬದ್ಧನಾಗಿರತಕ್ಕದ್ದು :

ಪರಂತು, ಯಾವ ವ್ಯಕ್ತಿಯೂ ತನ್ನ ಕುಟುಂಬದ ಯಾವಳೇ ಮಹಿಳಾ ಸದಸ್ಯೆಯ ಹೆಸರನ್ನು ಹೇಳಲು ಬದ್ಧನಲ್ಲ ಮತ್ತು ಯಾವ ಮಹಿಳೆಯೂ ತನ್ನ ಗಂಡನ ಅಥವಾ ಮೃತನಾದ ಗಂಡನ ಹೆಸರನ್ನು ಅಥವಾ ಯಾವ ಹೆಸರನ್ನು ಹೇಳಲು ಆಕೆಯನ್ನು ರೂಢಿಯು ನಿಷೇಧಿಸಿದೆಯೋ ಆ ಯಾವನೇ ವ್ಯಕ್ತಿಯ ಹೆಸರನ್ನು ಹೇಳಲು ಅವಳು ಬದ್ಧಳಲ್ಲ.

9. ಅಧಿಭೋಗದಾರನು ಪ್ರವೇಶಕ್ಕೆ ಮತ್ತು ಸಂಖ್ಯೆಗಳನ್ನು ಅಂಟಿಸುವುದಕ್ಕೆ ಅವಕಾಶ ನೀಡತಕ್ಕದ್ದು.—ಯಾವುದೇ ಮನೆ, ಆವರಣ ನೌಕೆ ಅಥವಾ ಇತರ ಸ್ಥಳದ ಪ್ರತಿಯೊಬ್ಬ ಅಧಿಭೋಗದಾರನು ಜನಗಣತಿ ಅಧಿಕಾರಗಳಿಗೆ ಜನಗಣತಿಯ ಉದ್ದೇಶಗಳಿಗಾಗಿ ಮತ್ತು ದೇಶದ ರೂಢಿಗಳನ್ನು ಗಮನದಲ್ಲಿರಿಸಿ ಯುಕ್ತವಾಗಬಹುದಾದಂತೆ ಅವರು ಅವುಗಳೊಳಕ್ಕೆ ಪ್ರವೇಶವನ್ನು ಅವಕಾಶ ನೀಡತಕ್ಕದ್ದು ಮತ್ತು ಅವರಿಗೆ ಆ ಸ್ಥಳಗಳಲ್ಲಿ ಜನಗಣತಿಯ ಉದ್ದೇಶಗಳಿಗಾಗಿ ಅವಶ್ಯ ಬೀಳಬಹುದಾಂತಹ ಅಕ್ಷರಗಳು, ಗುರುತುಗಳು ಅಥವಾ ಅಂಕಿಗಳನ್ನು ಬಣ್ಣದಲ್ಲಿ ಬರೆಯಲು ಅಥವಾ ಅಂಟಿಸಲು ಅವಕಾಶ ನೀಡತಕ್ಕದ್ದು.

10. ಅಧಿಭೋಗದಾರನು ಅಥವಾ ವ್ಯವಸ್ಥಾಪಕನು ಅನುಸೂಚಿಯನ್ನು ಭರ್ತಿಮಾಡತಕ್ಕದ್ದು.—ಈ ಬಗ್ಗೆ ರಾಜ್ಯ ಸರ್ಕಾರವು ಹೊರಡಿಸಬಹುದಾದಂಥ ಆದೇಶಗಳಿಗೆ ಒಳಪಟ್ಟು ಜನಗಣತಿ ಅಧಿಕಾರಿಯು ತನ್ನನ್ನು ಯಾವ ಸ್ಥಳೀಯ ಪ್ರದೇಶಕ್ಕಾಗಿ ನೇಮಿಸಲಾಗಿದೆಯೋ ಆ ನೇಮಿಸಿರುವ ಸ್ಥಳೀಯ ಪ್ರದೇಶದ ಒಳಗೆ ಯಾವುದೇ ವಾಸಗೃಹದಲ್ಲಿ ಅಥವಾ ಯಾವುದೇ ವಾಣಿಜ್ಯ ಅಥವಾ ಔದ್ಯಮಿಕ ಕಾರ್ಯ ಸಂಸ್ಥೆಯ ವ್ಯವಸ್ಥಾಪಕ ಅಥವಾ ಯಾವನೇ ಅಧಿಕಾರಿಯ ಬಳಿಯಲ್ಲಿ, ಜನಗಣತಿಯನ್ನು ತೆಗೆದುಕೊಳ್ಳುವ ಕಾಲದಲ್ಲಿ ಸಂದರ್ಭಾನುಸಾರ ಅಂಥ ಗೃಹ ಅಥವಾ ಅದರ ಭಾಗದಲ್ಲಿನ ನಿವಾಸಿಗಳ ಅಥವಾ ಅಂಥ ವ್ಯವಸ್ಥಾಪಕ ಅಥವಾ ಅಧಿಕಾರಿಯ ಕೈಕೆಳಗೆ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ಸಂಬಂಧಿಸಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತಹ ವಿವರಗಳನ್ನು ಅಂಥ ಗೃಹದ ಅಥವಾ ಅದರ ಯಾವುದೇ ನಿರ್ದಿಷ್ಟಪಡಿಸಿದ ಭಾಗದ ಅಧಿಭೋಗದಾರನು ಅಥವಾ ಅಂಥ ವ್ಯವಸ್ಥಾಪಕನು ಅಥವಾ ಅಂಥ ಅಧಿಕಾರಿಯು ಅದನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಅನುಸೂಚಿಯನ್ನು ಬಿಟ್ಟು ಹೋಗಬಹುದು ಅಥವಾ ಬಿಟ್ಟುಹೋಗುವಂತೆ ಮಾಡಬಹುದು.

(2) ಅಂಥ ಅನುಸೂಚಿಯನ್ನು ಹಾಗೆ ಬಿಟ್ಟು ಹೋಗಿರುವಾಗ ಸಂದರ್ಭಾನುಸಾರ ಸದರಿ ಅಧಿಭೋಗದಾರ, ವ್ಯವಸ್ಥಾಪಕ ಅಥವಾ ಅಧಿಕಾರಿಯು ಸಂದರ್ಭಾನುಸಾರ ಅಂಥ ಗೃಹದ ಅಥವಾ ಅದರ ಭಾಗದಲ್ಲಿನ ನಿವಾಸಿಗಳ ಅಥವಾ ತನ್ನ ಅಧೀನದಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ತನಗೆ ತಿಳಿದಿರುವ ಅಥವಾ ತಾನು ನಂಬಲಾದ ಮಟ್ಟಿಗೆ ಅದನ್ನು ಭರ್ತಿಮಾಡತಕ್ಕದು ಅಥವಾ ಭರ್ತಿ ಮಾಡಿಸತಕ್ಕದು ಮತ್ತು ಅದಕ್ಕೆ ತನ್ನ ಹೆಸರಿನ ಸಹಿ ಮಾಡತಕ್ಕದು ಮತ್ತು ಹಾಗೆ ಅಗತ್ಯಪಡಿಸಿದಲ್ಲಿ ಹಾಗೆ ಭರ್ತಿ ಮಾಡಿದ ಮತ್ತು ಸಹಿ ಹಾಕಿದ ಅನುಸೂಚಿಯನ್ನು ಜನಗಣತಿ ಅಧಿಕಾರಿಗೆ ಅಥವಾ ಜನಗಣತಿ ಅಧಿಕಾರಿಯು ನಿರ್ದೇಶಿಸಬಹುದಾದ ವ್ಯಕ್ತಿಗೆ ವರ್ಗಾವಣೆ ಮಾಡತಕ್ಕದು.

11. ದಂಡನೆಗಳು.—(1)(ಕ) ಯಾವನೇ ಜನಗಣತಿ ಅಧಿಕಾರಿಯು ಅಥವಾ ಜನಗಣತಿ ತೆಗೆದುಕೊಳ್ಳಲು ನೆರವನು ಕೊಡಬೇಕೆಂದು ಕಾನೂನು ಬದ್ಧವಾಗಿ ಯಾರಿಗೆ ಅಗತ್ಯ ಪಡಿಸಲಾಗಿದೆಯೋ ಆ ಯಾವನೇ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಮೇರೆಗೆ ತನಗೆ ವಿಧಿಸಲಾದ ಯಾವುದೇ ಕರ್ತವ್ಯವನ್ನು ನೆರವೇರಿಸುವಲ್ಲಿ ಅಥವಾ ತನಗೆ ನೀಡಲಾದ ಯಾವುದೇ ಆದೇಶವನ್ನು ಪಾಲಿಸುವುದರಲ್ಲಿ ಯುಕ್ತಶ್ರದ್ಧೆಯನ್ನು ವಹಿಸಲು ನಿರಾಕರಿಸಿದರೆ ಅಥವಾ ನಿರ್ಲಕ್ಷಿಸಿದರೆ ಅಥವಾ ಯಾವನೇ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯು ಅಂಥ ಕರ್ತವ್ಯವನು ನೆರವೇರಿಸುವಲ್ಲಿ ಅಥವಾ ಅಂಥ ಆದೇಶವನ್ನು ಪಾಲಿಸುವಲ್ಲಿ ಆತಂಕ ಅಥವಾ ಅಡ್ಡಿಯುಂಟು ಮಾಡಿದರೆ; ಅಥವಾ

(ಖ) ಯಾವನೇ ಜನಗಣತಿ ಅಧಿಕಾರಿಯು, ಯಾವುದೇ ಮನನೋಯಿಸುವ ಅಥವಾ ಅನುಚಿತ ಪ್ರಶ್ನೆಯನ್ನು ಉದ್ದೇಶಪೂರ್ವಕವಾಗಿ ಕೇಳಿದರೆ ಅಥವಾ ತಿಳಿದೂ ತಿಳಿದೂ ಯಾವುದೇ ಸುಳ್ಳು ವಿವರಪಟ್ಟಿಕೆಯನ್ನು ತಯಾರಿಸಿದರೆ ಅಥವಾ ಕೇಂದ್ರಸರ್ಕಾರ ಅಥವಾ ರಾಜ್ಯಸರ್ಕಾರದ ಪೂರ್ವಾನುಮತಿ ಇಲ್ಲದೆ, ಜನಗಣತಿ ವಿವರಪಟ್ಟಿಕೆಯ ಮೂಲಕ ಅಥವಾ ಅದರ ಉದ್ದೇಶಕ್ಕಾಗಿ ತಾನು ಪಡೆದ ಮಾಹಿತಿಯನ್ನು ಬಹಿರಂಗಪಡಿಸಿದರೆ; ಅಥವಾ

(ಗ) ಯಾವನೇ ವಿಂಗಡಿಸುವವನು, ಸಂಕಲಕಾರನು ಅಥವಾ ಜನಗಣತಿ ಸಿಬ್ಬಂದಿಯ ಇತರ ಸದಸ್ಯನು, ಯಾವುದೇ ಜನಗಣತಿ ದಸ್ತಾವೇಜನ್ನು ತೆಗೆದುಹಾಕಿದರೆ, ಬಚ್ಚಿಟ್ಟರೆ, ಹಾನಿಗೊಳಿಸಿದರೆ ಅಥವಾ ನಾಶ ಮಾಡಿದರೆ ಅಥವಾ ಯಾವುದೇ ಜನಗಣತಿ ದಸ್ತಾವೇಜನ್ನು ಜನಗಣತಿ ಫಲಿತಾಂಶವನ್ನು ಸುಳ್ಳು ಮಾಡುವ ಅಥವಾ ಅದರ ಕ್ರೋಢೀಕರಣಗಳಿಗೆ ಧಕ್ಕೆಯುಂಟು ಮಾಡುವ ಸಂಭವವಿರುವ ರೀತಿಯಲ್ಲಿ ವ್ಯವಹರಿಸಿದರೆ; ಅಥವಾ

(ಘ) ಯಾವನೇ ವ್ಯಕ್ತಿಯು, 8ನೇ ಪ್ರಕರಣದ ಮೂಲಕ ತಾನು ಕಾನೂನು ಸಮ್ಮತವಾಗಿ ಉತ್ತರನೀಡಲು ಬದ್ಧನಾಗಿರುವಲ್ಲಿ ಜನಗಣತಿ ಅಧಿಕಾರಿಯು ತನ್ನನ್ನು ಕೇಳಿದ ಯಾವುದೇ ಪ್ರಶ್ನೆಗೆ ಉದ್ದೇಶ ಪೂರ್ವಕವಾಗಿ ಸುಳ್ಳು ಉತ್ತರವನ್ನು ನೀಡಿದರೆ ಅಥವಾ ತನಗೆ ತಿಳಿದಾದ ಅಥವಾ ತಾನು ನಂಬಬಹುದಾದ ಮಟ್ಟಿಗೆ ಉತ್ತರವನ್ನು ನೀಡಲು ನಿರಾಕರಿಸಿದರೆ; ಅಥವಾ

(ಙ) ಯಾವುದೇ ಮನೆ, ಆವರಣ ನೌಕೆ ಅಥವಾ ಇತರ ಪ್ರದೇಶದ ಅಧಿಭೋಗದಾರನು, 9ನೇ ಪ್ರಕರಣದ ಮೂಲಕ ಪ್ರವೇಶ ಅವಕಾಶ ನೀಡಲು ಅವನನ್ನು ಅಗತ್ಯಪಡಿಸಲಾಗಿರುವಂತೆ ಯಾವುದೇ ಪ್ರವೇಶಾವಕಾಶವನ್ನು ಜನಗಣತಿ ಅಧಿಕಾರಿಗೆ ನೀಡಲು ನಿರಾಕರಿಸಿದರೆ; ಅಥವಾ

(ಚ) ಯಾವನೇ ವ್ಯಕ್ತಿಯು, ಜನಗಣತಿಯ ಉದ್ದೇಶಗಳಿಗಾಗಿ, ಬಣ್ಣದಲ್ಲಿ ಬರೆದ ಅಥವಾ ಅಂಟಿಸಿದ ಯಾವುದೇ ಅಕ್ಷರಗಳನ್ನು, ಗುರುತುಗಳನ್ನು ಅಥವಾ ಅಂಕಿಗಳನ್ನು ತೆಗೆದುಹಾಕಿದರೆ, ಅಳಿಸಿಹಾಕಿದರೆ, ವ್ಯತ್ಯಸ್ತಗೊಳಿಸಿದರೆ ಅಥವಾ ಹಾನಿಗೊಳಿಸಿದರೆ; ಅಥವಾ

(ಛ) ಯಾವನೇ ವ್ಯಕ್ತಿಗೆ, 10ನೇ ಪ್ರಕರಣದ ಮೇರೆಗೆ ಅನುಸೂಚಿಯನ್ನು ಭರ್ತಿಮಾಡಲು ಅಗತ್ಯಪಡಿಸಲಾಗಿದ್ದು ತಿಳಿದೂ ತಿಳಿದೂ ಮತ್ತು ಯಾವುದೇ ಸಾಕಷ್ಟು ಕಾರಣವಿಲ್ಲದೆ ಆ ಪ್ರಕರಣದ ಉಪಬಂಧಗಳನ್ನು ಪಾಲಿಸಲು ಅವನು ತಪ್ಪಿದರೆ ಅಥವಾ ಅದರ ಮೇರೆಗೆ ಸುಳ್ಳು ವಿವರಪಟ್ಟಿಕೆಯನ್ನು ತಯಾರಿಸಿದರೆ; ಅಥವಾ

(ಜ) ಯಾವನೇ ವ್ಯಕ್ತಿಯು ಜನಗಣತಿ ಕಚೇರಿಯ ಒಳಗೆ ಅತಿಕ್ರಮ ಪ್ರವೇಶ ಮಾಡಿದರೆ;

ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಭಾಗ (ಖ) ಅಥವಾ ಭಾಗ (ಗ) ದ ಮೇರೆಗೆ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ ಆರು ತಿಂಗಳೊಳಗಿನ ವಿಸ್ತರಿಸಬಹುದಾದ ಕಾರಾವಾಸದಿಂದ ಸಹ ದಂಡನೀಯನಾಗತಕ್ಕದು,

(2) (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

12. ಪ್ರಾಸಿಕ್ಯೂಷನ್ನುಗಳಿಗೆ ಮಂಜೂರಾತಿ ಅಗತ್ಯ.—ಈ ಅಧಿನಿಯಮದ ಮೇರೆಗಿನ ಯಾವುದೇ ಪ್ರಾಸಿಕ್ಯೂಷನನ್ನು ರಾಜ್ಯಸರ್ಕಾರದ ಅಥವಾ ರಾಜ್ಯಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಪ್ರಾಧಿಕಾರಿಯ ಪೂರ್ವ ಮಂಜೂರಾತಿಯಿಲ್ಲದೇ ಹೂಡತಕ್ಕದಲ್ಲ.

13. ಇತರ ಕಾನೂನುಗಳ ಪ್ರವರ್ತನೆಗೆ ಪ್ರತಿಷೇಧವಿಲ್ಲ.—ಈ ಅಧಿನಿಯಮದಲ್ಲಿರುವುದು ಯಾವುದೂ ಯಾವನೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ಅಪರಾಧವಾಗುವಂತಹ ಯಾವುದೇ ಕೃತ್ಯ ಅಥವಾ ಲೋಪಕ್ಕಾಗಿ ಯಾವುದೇ ಇತರ ಕಾನೂನಿನ ಮೇರೆಗೆ ಪ್ರಾಸಿಕ್ಯೂಷನ್ ಮಾಡುವುದನ್ನು ಪ್ರತಿಬಂಧಿಸುತ್ತದೆಂದು ಭಾವಿಸತಕ್ಕದಲ್ಲ:

ಪರಂತು, ಅಂಥ ಯಾವುದೇ ಪ್ರಾಸಿಕ್ಯೂಷನನ್ನು 12ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪೂರ್ವ ಮಂಜೂರಾತಿಯೊಂದಿಗೆ ಹೊರತು ಹೂಡತಕ್ಕದಲ್ಲ.

14. ಅಧಿಕಾರ ವ್ಯಾಪ್ತಿ.—ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಎರಡನೇದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯ ಕ್ಕಿಂತ ಕೆಳದರ್ಜೆಯ ಯಾವ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಅಪರಾಧವಾಗುವ ಯಾವುದೇ ಕೃತ್ಯ ಅಥವಾ ಲೋಪವನ್ನು ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಅಧಿವಿಚಾರಣೆ ಮಾಡತಕ್ಕದಲ್ಲ.

15. ಜನಗಣತಿಯ ದಾಖಲೆಗಳ ಪರಿಶೀಲನೆಗೆ ಅವಕಾಶವಿಲ್ಲ ಹಾಗೂ ಅವು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲ.—ಜನಗಣತಿ ಅಧಿಕಾರಿಯು ಹಾಗೆ ತನ್ನ ಕರ್ತವ್ಯವನ್ನು ನೆರವೇರಿಸುತ್ತಿರುವಾಗ ತಯಾರಿಸಿದ ಯಾವುದೇ ಪುಸ್ತಕ, ರಿಜಿಸ್ಟರು ಅಥವಾ ದಾಖಲೆಯನ್ನು ಅಥವಾ 10ನೇ ಪ್ರಕರಣದ ಮೇರೆಗೆ ಕೊಡಲಾದ ಯಾವುದೇ ಅನುಸೂಚಿಯನ್ನು ಪರಿಶೀಲಿಸಲು ಯಾವ ವ್ಯಕ್ತಿಗೂ ಹಕ್ಕಿರತಕ್ಕುದಲ್ಲ, ಮತ್ತು ಭಾರತ ಸಾಕ್ಷ್ಯ ಅಧಿನಿಯಮ 1872ರಲ್ಲಿ ತದ್ವಿರುದ್ಧವಾಗಿ ಏನೇ ಇದ್ದಾಗ್ಯೂ, ಅಂಥ ಯಾವುದೇ ಪುಸ್ತಕ, ರಿಜಿಸ್ಟರು, ದಾಖಲೆ ಅಥವಾ ಅನುಸೂಚಿಯು ಯಾವ ಸಮೂದಾ, ಎಂಥದೇ ಸಿವಿಲ್ ವ್ಯವಹರಣೆಯಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ಅಥವಾ ಯಾವ ಕೃತ್ಯ ಅಥವಾ ಲೋಪವು ಅಪರಾಧವಾಗುತ್ತದೋ ಆ ಕೃತ್ಯ ಅಥವಾ ಲೋಪಕ್ಕಾಗಿ ಈ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಇತರ ಕಾನೂನು ಮೇರೆಗಿನ ಪ್ರಾಸಿಕ್ಯೂಷನ್‌ನ್ನು ಹೊರತುಪಡಿಸಿ, ಯಾವುದೇ ಕ್ರಿಮಿನಲ್ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗತಕ್ಕುದಲ್ಲ.

16. ಪುರಸಭೆಗಳಲ್ಲಿ ಜನಗಣತಿ ತೆಗೆದುಕೊಳ್ಳುವ ವಿಧಾನದ ಬಗ್ಗೆ ಇತರ ಕಾನೂನುಗಳ ತಾತ್ಕಾಲಿಕ ಅಮಾನತ್ತು.—ಯಾವುದೇ ಪುರಸಭೆಯಲ್ಲಿ ಜನಗಣತಿಯನ್ನು ಯಾವ ವಿಧಾನದಲ್ಲಿ ತೆಗೆದುಕೊಳ್ಳಬೇಕು ಎಂಬುದಕ್ಕೆ ಸಂಬಂಧಿಸಿ ಯಾವುದೇ ಅಧಿನಿಯಮಿತಿ ಅಥವಾ ನಿಯಮದಲ್ಲಿ ಏನೇ ಇದ್ದಾಗ್ಯೂ ಪುರಸಭಾ ಪ್ರಾಧಿಕಾರವು ಜನಗಣತಿ ಕಾರ್ಯಾಚರಣೆಯ ನಿರ್ದೇಶಕನೊಂದಿಗೆ ಅಥವಾ ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಬಹುದಾದಂತಹ ಯಾವುದೇ ಇತರ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ಯಾವುದೇ ಜನಗಣತಿಯನ್ನು ತೆಗೆದುಕೊಳ್ಳುವುದಕ್ಕಾಗಿ ನೇಮಿಸಲಾದ ಕಾಲದಲ್ಲಿ ಪುರಸಭೆಯ ಜನಗಣತಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಲಾದ ಕ್ರಮದಲ್ಲಿ ತೆಗೆದುಕೊಳ್ಳುವಂತೆ ಮಾಡತಕ್ಕುದು.

17. ಅಂಕಿ ಅಂಶಗಳ ಸಾರಾಂಶಗಳನ್ನು ಕೊಡುವುದು.—ಜನಗಣತಿಯ ಕಮೀಷನರನು ಅಥವಾ ಯಾವುದೇ ಜನಗಣತಿ ಕಾರ್ಯಾಚರಣೆಯ ನಿರ್ದೇಶಕನು ಅಥವಾ ರಾಜ್ಯಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಬಹುದಾದಂತಹ ಯಾವನೇ ವ್ಯಕ್ತಿಯು, ತಾನು ಯುಕ್ತವೆಂದು ಭಾವಿಸಿದರೆ, ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ವ್ಯಕ್ತಿಯ ಯಾವುದೇ ಕೋರಿಕೆಯ ಮತ್ತು ತಾನು ನಿರ್ಧರಿಸಬಹುದಾದ ಖರ್ಚಿನ ಮೇಲೆ ಯಾವುದೇ ಪ್ರಕಟಿತ ವರದಿಯಲ್ಲಿ ಅಡಕವಾಗಿರದ ಮತ್ತು ಆ ಸ್ಥಳೀಯ ಪ್ರಾಧಿಕಾರ ಅಥವಾ ವ್ಯಕ್ತಿಯು ಅದನ್ನು ಅಗತ್ಯಪಡಿಸುವುದು ಯುಕ್ತವಾಗಿದೆ ಎಂದು ತಾನು ಅಭಿಪ್ರಾಯ ಪಡುವ, ಸಂದರ್ಭಾನುಸಾರ ಭಾರತ ಅಥವಾ ಯಾವುದೇ ರಾಜ್ಯದ ಜನಗಣತಿ ವಿವರಪಟ್ಟಿಕೆಗಳಿಂದ ಪಡೆಯಬಹುದಾದ ಯಾವುದೇ ಅಂಥ ಅಂಕಿಅಂಶಗಳ ಮಾಹಿತಿಯನ್ನು ಒಳಗೊಂಡ ಸಾರಾಂಶಗಳನ್ನು ತಯಾರಿಸುವಂತೆ ಮತ್ತು ಒದಗಿಸುವಂತೆ ಮಾಡಬಹುದು.

18. ನಿಯಮ ರಚನಾಧಿಕಾರ.—(1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯತ್ವಕ್ಕೆ ಬಾಧಕವಾಗದಂತೆ ಕೇಂದ್ರಸರ್ಕಾರವು ಜನಗಣತಿ ಅಧಿಕಾರಿಗಳನ್ನು ಮತ್ತು ಜನಗಣತಿ ಅಧಿಕಾರಿಗಳ ಯಾವುದೇ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಅಥವಾ ಜನಗಣತಿ ತೆಗೆದುಕೊಳ್ಳಲು ನೆರವು ನೀಡುವುದಕ್ಕಾಗಿ ವ್ಯಕ್ತಿಗಳನ್ನು ನೇಮಿಸುವ ಬಗ್ಗೆ ಮತ್ತು ಅಂಥ ಅಧಿಕಾರಿಗಳಿಗೆ ಮತ್ತು ವ್ಯಕ್ತಿಗಳಿಗೆ ಕೊಡಬೇಕಾಗಿರುವ ಸಾಮಾನ್ಯ ಅನುದೇಶಗಳ ಬಗ್ಗೆ ಕೇಂದ್ರಸರ್ಕಾರವು ಉಪಬಂಧವನ್ನು ಕಲ್ಪಿಸಿ ನಿಯಮಗಳನ್ನು ರಚಿಸಬಹುದು.